

ಮೊದಲೆಲ್ಲ ಅವಳ ಬಗ್ಗೆ ಎಲ್ಲ ಕಥೆಗಳನ್ನು ತಂದು ನನಗೆ ಹೇಳ್ತಿದ್ದೆ, ಈಚೀಚೆಗೆ ಯಾಕೆ ಏನನ್ನೂ ಹೇಳ್ತಿಲ್ಲ? ಹೇಳು' ಎಂದು ತನ್ನ ತಂಗಿಯನ್ನು ಪೀಡಿಸುತ್ತಿದ್ದ.

'ನಾನು ತಾಯಾಣೆಗೂ ಹೇಳ್ತೀನಿ ಅಣ್ಣಾ! ಅತ್ತಿಗೆಯಿಂದೇನಾದರೂ ತಪ್ಪು ಸಿಕ್ಕರೆ ತಾನೇ ನಾನು ಹೇಳೋದು? ಅವಳು ನನ್ನ ಹತ್ತಿರ ಈಗ ಮೊದಲಿನಂತೆ ಅಣಕವಾಗಿ ಮಾತಾಡ್ತಿಲ್ಲ. ನಿನ್ನ ಮತ್ತು ಅಮ್ಮನ ಬಗೆಗೂ ಒಳ್ಳೆಯ ಮಾತನ್ನೇ ಆಡ್ತಾಳೆ' ಎಂದು ನಮ್ರವಾಗಿ ಹೇಳುವಳು.

ಅದು ನಿಜವೂ ಆಗಿತ್ತು.

ಅವಳು ಮೊದಮೊದಲು ತನ್ನ ನಾದಿನಿಯ ಜೊತೆ, ಅವಳ ದೇಹದ ನರ್ತಿಸುವ ಅಂಗಾಂಗಗಳ ಬಗ್ಗೆ ಕಟಕಿ ಮಾತುಗಳನ್ನು ಬಿಟ್ಟರೆ ಹೆಚ್ಚೇನೂ ಮಾತನಾಡುತ್ತಿರಲಿಲ್ಲ. ಅವಳನ್ನು ತನ್ನ ಕಣ್ಣಿನಲ್ಲಿ ಬಿದ್ದ ದೂಳಿನ ಕಸದಂತೆ ಕಾಣುತ್ತಿದ್ದಳು.

ಅದರೂ ಸಹ ಅಂತಹ ತಪ್ಪನ್ನೇನೂ ಅವಳು ಮಾಡಿರಲಿಲ್ಲ. ತನ್ನ ಗಂಡ ಮತ್ತು ಅತ್ತೆಯಿಂದ ಅಪಮಾನಿತಳಾದ ಅವಳು ಆ ಸಿಟ್ಟನ್ನು ತನ್ನ ಎಳೆಯ ನಾದಿನಿಯ ಮೇಲೆ ತೀರಿಸಿಕೊಳ್ಳುತ್ತಿದ್ದಳು. ತುಂಬಿದ ನೀರಿನ ಬಿಂದಿಗೆಯನ್ನು ಇಡುವಾಗ ಜೋರಾಗಿ ಅವಳ ತಲೆಯ ಮೇಲೆ ಕುಕ್ಕುತ್ತಿದ್ದಳು. ಅಲ್ಲದೆ ಹೊರಲಾರದ ಭಾರವಾದ ಹುಲ್ಲಿನ ಹೊರೆಯನ್ನು ಸಣ್ಣದಾಗಿ ಕಾಣುವಂತೆ ಬಿಗಿದು ಕಟ್ಟಿ ಅವಳ ತಲೆಯ ಮೇಲೆ ಹೇರುತ್ತಿದ್ದಳು.

ಆದರೆ, ಈ ಬೆಳಿಗ್ಗೆಯಿಂದ ತನ್ನ ನಾದಿನಿಯೊಂದಿಗೆ ಬಹಳ ಪ್ರೀತಿಯಿಂದ ಮಾತನಾಡುವುದಷ್ಟೇ ಅಲ್ಲದೆ ಅವಳ ಅತ್ತೆಯೂ ಕೂಡ ಸೊಸೆಯ ಬಗ್ಗೆ ವಾತ್ಸಲ್ಯದ ಭಾವನೆಯನ್ನು ತಾಳಿದಳು.

ಅತ್ತಿಗೆಯು ನೀರಿನ ಬಿಂದಿಗೆಯನ್ನು ಹುಡುಗಿಯ ತಲೆಯ ಮೇಲೆ ಮೆತ್ತಗೆ ಇಡುವಳು. ಅದೇನಾದರೂ